

# ಅವಧಿಪೂರ್ವ ಹೆರಿಗೆ; ಆತಂಕ ಬೇಡ

ಅವಧಿಪೂರ್ವ ಶಿಶುವಿನ ಜನನ ಹಾಗೂ ಅಕಾಲಿಕ ಜನನದಿಂದ ಮಗು ಮರಣವನ್ನಪ್ಪುವ ಸುದ್ದಿ ಆತಂಕ ಸೃಷ್ಟಿಸುತ್ತಿದೆ. ಮಗು ತಾಯಿಯ ಗರ್ಭದಲ್ಲಿ ಪೂರ್ಣಪ್ರಮಾಣದಲ್ಲಿ ಬೆಳೆದ ಬಳಿಕವೇ ಮಗುವಿನ ಹೆರಿಗೆಯಾಗಬೇಕು. ಅಕಾಲಿಕ ಶಿಶುಜನನ ಏಕೆ ಆಗುತ್ತದೆ? ಇದಕ್ಕೆ ಪರಿಹಾರವೇನು? ತಾಯಿ–ಮಗುವಿನ ಆರೋಗ್ಯದ ಕುರಿತ ಸಮಗ್ರ ವಿಶ್ಲೇಷಣಾತ್ಮಕ ಬರಹ ಇಲ್ಲಿದೆ.

**■ ಡಾ. ವೀಣಾ ಭಟ್, ಭದ್ರಾವತಿ**

ಅಕಾಲಿಕ ಅಥವಾ ಅವಧಿಪೂರ್ವ ಶಿಶುವಿನ ಜನನವಾದರೆ ಇದರಿಂದ ತಾಯಿಗೂ ಕಷ್ಟ, ಮಗುವಿನ ಅಳಿವು ಉಳಿವಿನ ಪ್ರಶ್ನೆಯೂ ಬೃಹದಾಕಾರವಾಗಿ ಕಾಡುತ್ತದೆ. ಇತ್ತೀಚೆಗೆ ಅಕಾಲಿಕ ಶಿಶು ಜನನದ ಸುದ್ದಿ ಆತಂಕಕ್ಕೆ ಕಾರಣವಾಗುತ್ತಿದೆ. ಅಕಾಲಿಕ ಅಥವಾ ಅವಧಿಪೂರ್ವವಾಗಿ ಹುಟ್ಟಿದ ಮಕ್ಕಳಲ್ಲಿಯೇ ಇಂತಹ ಸಾವುನೋವುಗಳು ಹೆಚ್ಚುತ್ತಿರುವುದು ಆತಂಕವನ್ನು ಇನ್ನೂ ಹೆಚ್ಚು ಮಾಡುತ್ತದೆ.

### ಏನಿದು ಅಕಾಲಿಕ ಹೆರಿಗೆ?

ಅಕಾಲಿಕ ಹೆರಿಗೆ ಎಂದರೆ ಗರ್ಭಾವಸ್ಥೆಯಲ್ಲಿ 37 ವಾರಗಳಿಗೂ ಮೊದಲೇ ಮಗುವಿನ ಜನನವಾಗುವುದು. ಪೂರ್ಣ ಗರ್ಭಧಾರಣೆಯ ಅವಧಿಯೆಂದರೆ 40 ವಾರಗಳು. ಶೇ.10 ರಿಂದ 15ರಷ್ಟು ಗರ್ಭಧಾರಣೆಯಲ್ಲಿ ಅಕಾಲಿಕ ಹೆರಿಗೆಯುಂಟಾಗಬಹುದು. ಅಂದರೆ 10ರಲ್ಲಿ ಒಂದು ಮಗು ವಿಶ್ವದಲ್ಲಿ ಅವಧಿಗೆ ಮುನ್ನವೇ ಹುಟ್ಟುತ್ತದೆ. ಈ ಅಕಾಲಿಕ ಹೆರಿಗೆಯೇ ಹೆಚ್ಚಿನ ನವಜಾತ ಶಿಶುಗಳ ಅಸ್ವಸ್ಥತೆ ಹಾಗೂ ಸಾವುಗಳಿಗೆ ಬಹುಮುಖ್ಯ ಕಾರಣವಾಗಿರುತ್ತದೆ. ಹೆಚ್ಚಿನ ಅಕಾಲಿಕ ಹೆರಿಗೆಗಳಲ್ಲಿ, ಶೇ.35ಕ್ಕೂ ಹೆಚ್ಚು ಅಕಾಲಿಕವಾಗಿ ನೆತ್ತಿನೀರು ಹೋಗುವುದರಿಂದ ಆಗುತ್ತದೆ.

### ಅಕಾಲಿಕ ಹೆರಿಗೆಯಿಂದ ತೊಂದರೆಗಳು

ಜನನ ಸಮಯದಲ್ಲಿ ಮಗುವಿನ ಗರ್ಭಾವಸ್ಥೆಯ ಅವಧಿ ಕಡಿಮೆಯಿದ್ದಷ್ಟು ಮಗವಿಗೆ ತೊಂದರೆಗಳು ಹೆಚ್ಚಾಗುತ್ತವೆ. ಮಗುವಿನ ಹೆಚ್ಚಿನ ಅಂಗಾಂಗಗಳು ಸರಿಯಾಗಿ ಬೆಳೆದಿರುವುದಿಲ್ಲ. ಅದರಲ್ಲೂ ಮುಖ್ಯವಾಗಿ ಶ್ವಾಸಕೋಶದಲ್ಲಿ ಸರ್ಫೆಕ್ಟಂಟ್ (Surfactant) ಎನ್ನುವ ಜಿಡ್ಡಿನಂತಹ ವಸ್ತು ಶ್ವಾಸಕೋಶಗಳ ಕುಗ್ಗುವಿಕೆಯನ್ನು ಸುಲಲಿತಗೊಳಿಸಿ ಸುರಕ್ಷಿತವಾದ ಉಸಿರಾಟ ಪ್ರಕ್ರಿಯೆಗೆ ಅತ್ಯಗತ್ಯವಾಗಿದೆ. ಅಕಾಲಿಕ ಹೆರಿಗೆಯಲ್ಲಿ ಈ ಸರ್ಫೆಕ್ಟಂಟ್ (Surfactant) ನ ಕೊರತೆಯಾದಾಗ ಉಸಿರಾಟ ಪ್ರಕ್ರಿಯೆ ಸರಾಗವಾಗಿ ಆಗದೆ ಉಸಿರಾಟ ತೊಂದರೆಯ ಬಳಲಿಕೆಯ ಲಕ್ಷಣ (Respiratory Distress Syndrom) ಉಂಟಾಗುತ್ತದೆ.

ಅಕಾಲಿಕ ಹೆರಿಗೆಯಿಂದ ತಕ್ಷಣದ ಹಾಗೂ ದೀರ್ಘಾವಧಿ ತೊಂದರೆಗಳುಂಟಾಗಬಹುದು. ಉಸಿರಾಟದ ತೊಂದರೆ, ಮೆದುಳಿನಲ್ಲಿ ರಕ್ತಸ್ರಾವ, ಆಪ್‌ನಿಯಾ ಅಥವಾ ಉಸಿರು ಕಟ್ಟುವುದು, ಕರುಳಿನ ಸೋಂಕು (Necrotizing Colitis) ಅಕಾಲಿಕ ಶಿಶುವಿನ ರೆಟಿನೋಪಥಿ (ROP) ಹಾಗೆಯೇ ದೀರ್ಘಾವಧಿಯ ವಿಕಲತೆಗಳಾದ ಬುದ್ಧಿಮಾಂದ್ಯತೆ, ಸೆರೆಬ್ರಲ್‌ಪಾಲ್ಸಿ, ಶ್ವಾಸಕೋಶದ ತೊಂದರೆಗಳು, ಶ್ರವಣ ಹಾಗೂ ದೃಷ್ಟಿ ವಿಕಲತೆಗಳು, ನರದ ದುರ್ಬಲತೆ, ತಡವಾದ ಮೈಲಿಗಲ್ಲುಗಳು ಇತ್ಯಾದಿಗಳುಂಟಾಗಬಹುದು.

ಗರ್ಭಾವಸ್ಥೆಯಲ್ಲಿ 32 ವಾರಗಳಿಗೂ ನಂತರ ಹುಟ್ಟಿದ ಮಕ್ಕಳಿಗೆ ಹೆಚ್ಚಿನ ಸಮಸ್ಯೆ ಇರುವುದಿಲ್ಲ. ಆದರೆ ಭಾರತದಲ್ಲಂತೂ 30 ರಿಂದ 32 ವಾರಕ್ಕೂ ಮೊದಲೇ ಹುಟ್ಟಿದ ಮಕ್ಕಳು ಮತ್ತು 1 ಕೆ.ಜಿ ತೂಕಕ್ಕೂ ಕಡಿಮೆ ಇರುವ ಮಕ್ಕಳು ಬದುಕುವ ಸಂಭವ ಕಡಿಮೆ ಮತ್ತು ಅಂತಹ ಮಕ್ಕಳ ಚಿಕಿತ್ಸೆಗಾಗಿ ಅತ್ಯುತ್ತಮ ನವಜಾತ ಶಿಶುವಿನ ತೀವ್ರನಿಗಾ ಘಟಕಗಳ (NICU) ಅಗತ್ಯವಿದೆ. 28 ವಾರಕ್ಕೂ ಮೊದಲು ಹೆರಿಗೆಯಾದ ಮಕ್ಕಳಂತೂ ಬದುಕಿ ಉಳಿಯುವ ಸಂಭವ ಅತೀ ಕಡಿಮೆ. ಬದುಕುಳಿದರೂ ಕೂಡ ತೀವ್ರವಾದ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

### ಅಕಾಲಿಕ ಹೆರಿಗೆಗೆ ಕಾರಣವೇನು?

ನಿರ್ದಿಷ್ಟ ಕಾರಣಗಳನ್ನು ಕಂಡುಹಿಡಿದಿಲ್ಲವಾದರೂ ಶೇ.40ಕ್ಕೂ ಹೆಚ್ಚಿನ ಸಂದರ್ಭಗಳಲ್ಲಿ